ಸಿ.ಸಿ.1528-2018
ಪಿಡಬ್ಲು-೧

ದಿ: 28.01.2026 ರಂದು ಪಿರ್ಯಾದಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ಆರೋಪಿ ಪರ ಶ್ರೀಯುತ ಜಿ.ಎ.ಎಸ್. ವಕೀಲರಿಂದ.

8. ನಾನು ಆರೋಪಿಗೆ ನೀಡಿದ್ದೇನೆ ಎಂದು ಹೇಳುವ ಎಂಟು ಲಕ್ಷ ಹಣವನ್ನು ಆರೋಪಿಯು ಹಣ ನೀಡಿದ ಒಂದು ತಿಂಗಳ ಒಳಗೆ ಮರುಪಾವತಿಸುವುದಾಗಿ ತಿಳಿಸಿದ್ದರು. ನಾನು ಆರೋಪಿಗೆ ಹಣ ನೀಡಿದ ಒಂದು ತಿಂಗಳ ನಂತರ ಆರೋಪಿಯ ಬಳಿ ಹೋಗಿ ಹಣ ವಾಪಸ್ಸು ನೀಡುವಂತೆ ಕೇಳಿರುತ್ತೇನೆ. ಆ ರೀತಿ ನಾನು ಆರೋಪಿಯ ಮನೆಗೆ ಹೋಗಿ ಹಣ ವಾಪಸ್ಸು ನೀಡುವಂತೆ ಕೇಳಿರುತ್ತೇನೆ. ಸದರಿ ದಿನ ನಾನು ಒಬ್ಬನೇ ಆರೋಪಿಯ ಮನೆಗೆ ಹಣ ಕೇಳಲು ಹೋಗಿರುತ್ತೇನೆ. ಆ ರೀತಿ ನಾನು ಆರೋಪಿ ಮನೆಗೆ ಹಣ ವಾಪಸ್ಸು ನೀಡುವಂತೆ ಕೇಳಲು ಹೋಗಿದ್ದೆ ಎಂದು ಹೇಳುವ ದಿನ ಆರೋಪಿಯು ಯಾವುದೇ ಹಣವನ್ನು ನೀಡಿರುವುದಿಲ್ಲ ಮತ್ತು ಚೆಕ್ಕನ್ನು ನೀಡಿರುತ್ತಾರೆ. ಸದರಿ ದಿನ ಆರೋಪಿಯು ಒಟ್ಟು ಎರಡು ಚೆಕ್ಕುಗಳನ್ನು ನೀಡಿರುತ್ತಾರೆ. ಆ ರೀತಿ ಆರೋಪಿಯು ನನಗೆ ಎರಡು ಚೆಕ್ಕುಗಳನ್ನು ನೀಡಿದ್ದರು ಎಂದು ಹೇಳುವ ಸಮಯದಲ್ಲಿ ನಾನು ಮತ್ತು ಆರೋಪಿ ಮಾತ್ರ ಇದ್ದೇವು. ಈ ಮೇಲಿನ ವಿಚಾರಗಳನ್ನು ನನ್ನ ನೋಟಿಸ್ಸು, ಪಿರ್ಯಾದ್ದು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿಯಲ್ಲ.

9. ನಿಪಿ.7 ನ್ನು ಆರೋಪಿಯು ಸ್ವತ: ತಯಾರಿಸಿಕೊಂಡು ಬಂದಿರುತ್ತಾರೆ. ನಿಪಿ.7 ಕ್ಕೆ ಸಹಿಯನ್ನು ನಮ್ಮ ಮನೆಯಲ್ಲಿ ಮಾಡಲಾಗಿರುತ್ತದೆ. ನಿಪಿ.7 ದಾಖಲೆಗೆ ಯಾರೆಲ್ಲಾ ಸಹಿ ಮಾಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನಿಪಿ.7 ದಾಖಲೆಗೆ ಸಹಿ ಮಾಡುವ ಸಮಯದಲ್ಲಿ ಯಾರೆಲ್ಲಾ ಹಾಜರಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಆರೋಪಿಗೆ ನೀಡಿದ್ದೇನೆ ಎಂದು ಹೇಳುವ ಎಂಟು ಲಕ್ಷ ಹಣವನ್ನು ಐನೂರು ಮುಖಬೆಲೆಯ ನೋಟುಗಳಲ್ಲಿ ನೀಡಿರುತ್ತೇನೆ. ನಿಪಿ.7 ನ್ನು ಆರೋಪಿಯೇ ತಯಾರಿಸಿಕೊಂಡು ಬಂದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.7 ದಾಖಲೆಯನ್ನು ಕೈ ಬರಹ ತಜ್ಞರ ಪರಿಶೀಲನಗೆ ಕಳುಹಿಸಲು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ. ನನ್ನ ಮತ್ತು ಆರೋಪಿಯ ನಡುವೆ ನಡೆದಿದೆ ಎಂದು ಹೇಳುವ ಹಣದ ವ್ಯವಹಾರದ ಸಮಯದಲ್ಲಿ ರಾಜೇಶ್ ಎನ್ನುವವರು ಹಾಜರಿದ್ದರು ಎನ್ನುವ ವಿಚಾರವನ್ನು ನನ್ನ ನೋಟಿಸ್ಸು, ಪಿರ್ಯಾದ್ದು ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡಯದೇ ಇದ್ದರೂ ಆರೋಪಿಗೆ ತೊಂದರೆ ಕೊಡುವ ಸಲುವಾಗಿ ನಿಪಿ.1, 2 ಮತ್ತು 7 ನ್ನು ಸ್ವತ: ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ ಮತ್ತು ಆರೋಪಿಯು ನನಗೆ ಯಾವುದೇ ಹಣದ ಮರುಪಾವತಿ ಸಲುವಾಗಿ ಯಾವುದೇ ಚೆಕ್ಕುಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.

ಸಿ.ಸಿ.1528-2018

ಪಿಡಬ್ಲು-3

ದಿ: 28.01.2026 ರಂದು ಸಾಕ್ಷಿಯನ್ನು ಪುನ: ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು**: ಆರೋಪಿ ಪರ ಶ್ರೀಯುತ ಜಿ.ಎ.ಎಸ್. ವಕೀಲರಿಂದ.

4. ನಾನು ಹತ್ತನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಯ ಹೆಸರು ರಾಮಣ್ಣ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಆರೋಪಿಯು ಪಿರ್ಯಾದಿದಾರರಿಂದ ಹಣ ಪಡೆದುಕೊಂಡಿದ್ದರು ಎಂದು ಹೇಳುವ ದಿನಾಂಕ ಹೇಳಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು 2018 ನೇ ಸಾಲಿನ ಮಾರ್ಚ್ ಮಾಹೆ ಮತ್ತು ಯುಗಾದಿ ಹಬ್ಬದ ಸಮಯವಾಗಿತ್ತು ಎಂದು ನುಡಿಯುತ್ತಾರೆ. ನನಗೆ ಆರೋಪಿಯು ಪಿರ್ಯಾದಿದಾರರಿಂದ ಹಣ ಪಡೆದುಕೊಂಡಿದ್ದಾರೆ ಎಂದು ಹೇಳುವ ಪೂರ್ವದಲ್ಲಿ ಆರೋಪಿಯ ಪರಿಚಯವಿರಲಿಲ್ಲ. ನನಗೆ ಪ್ರಸ್ತುತ ಪ್ರಕರಣದ ಹಣದ ವ್ಯವಹಾರದ ಸಮಯದಲ್ಲಿ ಆರೋಪಿಯ ಪರಿಚಯವಾಗಿರುತ್ತದೆ.

5. ನಿಪಿ.7 ರಲ್ಲಿ ಯಾವೆಲ್ಲಾ ವಿಚಾರಗಳನ್ನು ಬರೆಯಲಾಗಿದೆ ಎಂದು ತಿಳಿದುಕೊಂಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಅಗ್ರಿಮೆಂಟ್ ಎಂದು ಹೇಳಿದ ವಿಚಾರ ತಿಳಿದಿತ್ತು ಮತ್ತು ಸದರಿ ದಾಖಲೆಯಲ್ಲಿ ಬರೆಯಲಾಗಿದ್ದ ವಿಚಾರಗಳು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಎಷ್ಟು ದಿನದ ಒಳಗೆ ಹಣವನ್ನು ವಾಪಸ್ಸು ನೀಡುತ್ತಾರೆ ಎಂದು ಹೇಳಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ನಾನು ಆರೋಪಿಯ ವಿರುದ್ದ ಚೆಕ್ಕು ಅಮಾನ್ಯಗೊಂಡ ಕುರಿತು ಪ್ರಕರಣ ದಾಖಲಿಸಿರುತ್ತೇನೆ. ಈಗ ನನಗೆ ತೋರಿಸಿದ ದಾಖಲೆ ನಾನು ಆರೋಪಿಯ ವಿರುದ್ದ ದಾಖಲಿಸಿದ್ದ ಪ್ರಕರಣದ ಪ್ರಮಾಣ ಪೂರ್ವಕ ಹೇಳಿಕೆಯ ಪ್ರತಿ ಆಗಿರುತ್ತದೆ ಎಂದರೆ ಸರಿ. ಸದರಿ ಪ್ರಮಾಣ ಪೂರ್ವಕ ಹೇಳಿಕೆಯ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.1 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆ ಆರೋಪಿಯು ನನಗೆ ನೀಡಿದ್ದಾರೆ ಎಂದು ಹೇಳುವ ಚೆಕ್ಕುಗಳ ಪ್ರತಿ ಆಗಿರುತ್ತದೆ ಎಂದರೆ ಸರಿ. ಸದರಿ ಚೆಕ್ಕಿನ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ನಿ.ಡಿ.2 ಎಂದು ಗುರುತಿಸಲಾಯಿತು. ನಿ.ಡಿ.2 ಚೆಕ್ಕುಗಳನ್ನು ಪಿರ್ಯಾದಿದಾರರು ನನಗೆ ನೀಡಿ ಬ್ಯಾಂಕಿಗೆ ಹಾಜರುಪಡಿಸಿ ಅಮಾನ್ಯಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನಿ.ಡಿ.2 ಚೆಕ್ಕುಗಳನ್ನು ಪಿರ್ಯಾದಿದಾರರು ನೀಡಿರುತ್ತಾರೆ ಎಂದರೆ ಸರಿ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆಯದೇ ಇದ್ದರೂ ಪಿರ್ಯಾದಿದಾರರ ಮಾತುಕೇಳಿ ಆರೋಪಿಯ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.